**ವ್ಯಾಖಾನ**

# ಅಂಬಿಗ ನಾ ನಿನ್ನ ನಂಬಿದೆ

**ಕೀರ್ತನೆಯ ಚಿಂತನೆ:**

ಆಗಿನ ಕಾಲದ ನವಕೋಟಿ ನಾರಾಯಣರು ಪುರುಂದರಗಡದ ಶೀನಪ್ಪ ನಾಯಕರು. ಚಿನಿವಾಲ ವೃತ್ತಿ. ದೈವೀ ಪುರುಷ, ದೈವೀಲೀಲೆ. ಪರಮಾತ್ಮ ವರೆಗೆ ಹಚ್ಚಿದ ಚಿನಿವಾಲರನ್ನು. ತಾನು ದಾನ ಹೀನ. ಬಂದ ದೈವೀ ವಿಪ್ರನಿಗೆ ಹೆಂಡತಿಯಿಂದ ಮೂಗುತಿ ದಾನ. ಪತ್ನಿಗೆ ಅಗ್ನಿ ಪರೀಕ್ಷೆ ಒಡ್ಡಿದ ನಾಯಕರು. ಬ್ರಹ್ಮಾಂಡ ನಾಯಕನ ಕರುಣೆ. ಪತ್ನಿ ರಕ್ಷಿತಳು. ಪತಿ ಚೊಕ್ಕ ಚೊಕ್ಕ ಬಂಗಾರವಾಗಿ ಹೊರ ಬಿದ್ದರು.

ಲೌಕಿಕ ಬಂಗಾರ ವೃತ್ತಿ ಬಿಟ್ಟರು. ಪರಮಾರ್ಥಿಕ ಬಂಗಾರ ಪರಮಾತ್ಮನ ವೃತ್ತಿ ಹಿಡಿದರು**. 'ಆದದ್ದೆಲ್ಲ ಒಳಿತೇ ಆಯಿತು. ಶ್ರೀಧರನ ಸೇವೆಗೆ ಸಾಧನ ಸಂಪತ್ತಾಯಿತು'** ಇಹ ಸಂಪತ್ತು ಲೊಳಲಟ್ಟೆ ಎಂದರು. ನವಕೋಟಿ ಸಂಪತ್ತಿನ ಮೇಲೊಂದು ತುಳಸೀದಳ ಇಟ್ಟರು. ಕೃಷ್ಣಾರ್ಪಣ ಎಂದರು.

ಸಂಪತ್ತಿನ ಈಶ ಈಗ ದೇವರ ದಾಸ. ಶೀನಪ್ಪ ನಾಯಕ ಈಗ ಪುರುಂದರ ದಾಸ.

ಪರಿವಾರದೊಂದಿಗೆ ಪಯಣ. ಯತಿವರೇಣ್ಯ ವ್ಯಾಸರಾಜ ಸನ್ನಿಧಿಯತ್ತ.

**ಗುರುವಿನ ಗುಲಾಮನಾಗಲು, ಮುಕ್ತಿ ಪಡೆಯಲು.**

ಮರಳಿ ಲೌಕಿಕದತ್ತ ಹೊರಳಿ ನೋಡಲಿಲ್ಲ ದಾಸರು.

ವ್ಯಾಸರಾಜರನ್ನು ಕಂಡರು. ಅವರೊಳಗೆ ಮುಖ್ಯ ಪ್ರಾಣರನ್ನು ಕಂಡರು. ಅವರ ಅಂತರ್ಯಾಮಿ ಪುರಂದರ ವಿಠ್ಠಲನನ್ನು ಕಂಡರು.

**ನಿನ್ನ ನೋಡಿ ಧನ್ಯನಾದೆನೋ ಸ್ವಾಮಿ** ಎಂದರು.

ಮುಂದಿನದೆಲ್ಲ ಪ್ರಸಿದ್ದ ಇತಿಹಾಸ. ದಾಸರಿಗೆ ಗೊತ್ತಿಲ್ಲದ ಶಾಸ್ತ್ರ ವಿಷಯವಿರಲಿಲ್ಲ.

ಮಹರ್ಷಿ ನಾರದ ಅವತಾರವಲ್ಲವೇ ! ಎಲ್ಲದರಲ್ಲಿ, ಎಲ್ಲೆಂದರಲ್ಲಿ, ಎಲ್ಲೆಡೆಯಲ್ಲಿ ಪರಮಾತ್ಮನನ್ನು ಕಂಡರು. ಮನೆ ಮಠ, ಬಂಧು ಬಳಗ, ಗುರು ಹಿರಿಯರು, ಜಡ ಚೇತನ ಎಲ್ಲವೂ ಪರಮಾತ್ಮಮಯ.

**ತಂದೆ ವಿಠ್ಠಲ, ತಾಯಿ ವಿಠ್ಠಲ, ಬಂಧು ಬಳಗ, ಸಖ ಎಲ್ಲ ವಿಠ್ಠಲ**.

ಈ ಅಸಾರ ಸಂಸಾರ ಸಸಾರ. ವರ ಸಾರ ಮುರಲೀಧರ.

ಸಂಸಾರದಲ್ಲಿ ಸಂಕಷ್ಟಗಳು ಅಪಾರ. ರಾಮನಾಮವೇ ಪರಿಹಾರ

**ಈಸ ಬೇಕು. ಇದ್ದು ಜಯಿಸ ಬೇಕು.** ಎಂದು ಸಾರಿದರು.

ದೇವಭಾಷೆ ಉಪನಿಷತ್ತಿನ ಸಾರ ರಸ ಆಯ್ದರು. ಸುಲಭ ಕನ್ನಡದ ಅಮೃತ ಮಾಡಿದರು. ಸರ್ವರಿಗೆ ಸಾಕಷ್ಟು ಉಣಬಡಿಸಿದರು.

'**ಪುರುಂದರ ಉಪನಿಷತ್**' ಎಂದು, '**ದಾಸರೆಂದರೆ ಪುರುಂದರ ದಾಸರಯ್ಯಾ**' ಎಂದೂ ವ್ಯಾಸತೀರ್ಥರು ಪ್ರಶಂಸಿದರು.

ಸಾಹಿತ್ಯ ಸರಸ್ವತಿಯ ಆರಾಧಿಸಿದರು. ಸಾಧನೆಯ ದಾರಿ ತೋರಿದರು. ಸುಲಭದ ಪೂಜೆ ಹೇಳಿಕೊಟ್ಟರು. ಸಮಾಜದ ಅಂಕುಡೊಂಕು ತಿದ್ದಿ ತೀಡಿದರು.

ಮನೆ ಮುಂದೆ ಗೋಪಾಳಕ್ಕೆ ಬಂದರು. ಯಜಮಾನಿ ಬಾಗಿಲು ಮುಚ್ಚಿದಳು.

ದಾಸರು ಧನಧಾನ್ಯ ಬೇಡಲು ಬಂದವರಲ್ಲ. ಅವರ ಪಾಪ ಕಳೆದು ಪುಣ್ಯರಾಶಿ ಕೂಡಿಸಲು ಬಂದವರು. ಉದ್ಧಾರಕರು.

**'ಕದವನಿಕ್ಕಿದಳು ಗಯ್ಯಾಳಿ ಒಳಗಿದ್ದ ಪಾಪ ಹೊರಗೆ ಹೋಗ ಬಾರದೆಂದು'**

ಗಯ್ಯಾಳಿತನ ಬಿಡು. ಮನೆಯ ಬಾಗಿಲು ಮುಚ್ಚು. ಮನದ ಬಾಗಿಲು ತೆರೆ – ದೇವರೆಡೆ ನಡೆ.

ಪಾಪಗಳ ಹಾರಿಸುವ, ಪುಣ್ಯ ಸೇರಿಸುವ ಹೆದ್ದೈವ. ತಿದ್ದಿದರು.

ಮತ್ತೊಂದು ಮನೆಗೆ ದಾಸರು. ಒಡತಿ ರಾಗಿ ತಂದಳು. ಲೌಕಿಕದಲ್ಲಿ ಅಲೌಕಿಕ.

'**ರಾಗಿ ತಂದೀರಾ ಭಿಕ್ಷಕೆ**' ಎಂದರು. ವಿರಾಗಿ ದಾಸರು ರಾಗಿಯಲ್ಲಿ ಭೋಗಿಯನ್ನು ಕಂಡರು.

ರಾಗ ಎಂದರೆ ಪ್ರೀತಿ. ಪ್ರೀತಿ ಎಂದರೆ ಭಕ್ತಿ. ರಾಗ ಉಳ್ಳವರಾಗಿ.

ಎಲ್ಲರ ರಾಗ ಯಾರಿಗಾಗಿ? ದೇವರಿಗಾಗಿ. ಹೀಗಾಗಿ ಆತ ಜಗದ ರಾಗಿ.

ಆ ರಾಗಿಯಲ್ಲಿ ರಾಗ ಇಟ್ಟು ಯೋಗ್ಯರಾಗಿ, ಭೋಗ್ಯರಾಗಿ, ಭಾಗ್ಯವಂತರಾಗಿ.

ಈಶನ ದಾಸರಾಗಿ ಎಂದು ಹಿತ ಉಪದೇಶಿಸಿದರು.

ತುಂಗಾ ತೀರ. ತುಂಬು ಪ್ರವಾಹ. ಚಕ್ರತೀರ್ಥ.

ನಾವಿಕನೊಬ್ಬ, ನಾವೆ ಒಂದು ನಿಂತಿದೆ. ಇತ್ತ ಜನರು. ಅತ್ತ ಹೋಗ ಬೇಕು.

ದಾಸರು ಕಂಡರು ಈ ದೃಶ್ಯ. ಅಂತರಂಗದಲಿ ಕಂತುಪಿತನ ಚಿಂತಿಸಿದರು.

ಜಗದಂಬಾರಮಣ ಅಂಬಿಗನಾದ. ಹರಿಗೋಲು ಈ ಶರೀರವಾಯಿತು. ಮುಳುಗಲು ಸಹಾಯಕ ಒಂಬತ್ತು ಛಿದ್ರಗಳು ಬೇರೆ ಈ ದೇಹಕ್ಕೆ!

ಎತ್ತಬೇಕತ್ತ ಎಳೆದೊಯ್ಯುವ ಸೆಳವುಗಳ ಹೊಳೆ ಸಂಸಾರವಾಯಿತು.

ಮದ, ಮತ್ಸರ, ಮೋಹಾದಿ, ಷಡ್ ವೈರಿಗಳು ಮೀರಿ ಬರುವ ತೆರೆಗಳು. ಮುಳುಗಿಸುವ ಸುಳಿ ಜನನ-ಮರಣಗಳ ಚಕ್ರ.

ಮುಂದೆ ದಾಸರ ಮಾತು-

**'ಹೇ ಸಂಸಾರ ಸಾಗರದ ಅಂಬಿಗಾ, ಜಗದಂಬಾ ರಮಣನೇ,**

ಹೊಳೆಯು ಗೊತ್ತು, ಹೊಳೆಯ ಆಳ ಗೊತ್ತು, ದಡ ಗೊತ್ತು. ಒತ್ತಿ ಬರುವ ಆಪತ್ತು ಗೊತ್ತು, ದಾಟಿಸುವ ಗತ್ತು ಗೊತ್ತು ನಿನಗೆ. ಹೊತ್ತು ಹೋಗುತಿದೆ. ಕತ್ತಲಾಗುತಿದೆ.

ಭಕ್ತಿ ಎಂಬ ಧನವ ಕೊಡುವೆ. ಮನವ ನಿನ್ನಲ್ಲಿಡುವೆ. ಯುಕ್ತಿಯಿಂದಲಿ ಮುಕ್ತಿ ಮಂಟಪ ದಡಕೆ ಕರೆದೊಯ್ಯೋ ಸ್ವಾಮಿ' ಎಂದು ಸ್ತುತಿಸಿ ಪ್ರಾರ್ಥಿಸುತ್ತಾರೆ.

ನೆರೆದ ಸಜ್ಜನ ಸಮೂಹ ಭಕ್ತಿ ಪರವಶರಾಗಿ ತಲೆ ಬಾಗುತ್ತಾರೆ.

ಹೀಗೆ ಮುಕುತಿ ಪಥವ ತೋರುತ್ತಾರೆ.

ಸರಸಿಜನಾಬನ ಜೊತೆ ಸರಸವಾಡುತ್ತಾರೆ ದಾಸರು.

ಒಮ್ಮೆ ದಾಸರಿಗೆ ನೀರು ಬೇಕಾಗಿತ್ತು.

ಜಗದ ಅಪ್ಪ ಶ್ರೀಹರಿ, ಶಿಷ್ಯ ಅಪ್ಪಣ್ಣನಾಗಿ ಬಂದು ಸುಡು ಬಿಸಿನಿರು ಕೊಟ್ಟ. ನಾಟಕ ತಿಳಿಯದ ದಾಸರು ಕೋಪದಿ ಅಪ್ಪಣನ ತಲೆಗೆ ಇಕ್ಕಿದರು. ವಿನೋದ ಪ್ರಿಯ ವಿಠ್ಠಲ. ನಾಟಕ ಆಡಿದ. ಏನೂ ಅರಿಯದ ದಾಸರ ಮೇಲೆ ಕಳುವಿನ ಆರೋಪ. ಊರಿನ ಅರಸು ದಾಸರನು ಕಂಬಕೆ ಕಟ್ಟಿ ಶಿಕ್ಷಿಸಿದ.

ಒಳಗಣ್ಣಿನಿಂದ ನೋಡಿದರು ದಾಸರು. ಕಪಟ ನಾಟಕವೆಲ್ಲ ತಿಳಿದರು ದಾಸರು.

- ಅಪ್ಪಣನನ್ನು ಶಿಕ್ಷಿಸಿದುದಕೆ ಶಿಕ್ಷೆ. ಸೇಡು ತೀರಿಸಿಕೊಂಡ ಭಾಗವತರ ಅರಸು.

**'ಮುಯ್ಯಿಗೆ ಮುಯ್ಯೆ ತೀರಿತು ಜಗದಯ್ಯಾ'**

ಎಂದು ಮತ್ತೆ ಹರಿಯನ್ನು ಕೊಂಡಾಡಿದರು ಭಕ್ತಿ ಪಾಶದಿ ದೇವರನ್ನೇ ಕಟ್ಟಿ ಹಾಕುತ್ತಾರೆ ದಾಸರು.

**'ನನಗೂ ಆಣೆ ನಿನಗೂ ಆಣೆ ರಂಗಾ',** ನಾನು ನಿನ್ನನ್ನು ಬಿಡುವದಿಲ್ಲ. ಅನ್ಯರನು ಬೇಡವದಿಲ್ಲ. ನೀನು ನನ್ನ ಬಿಡಬಾರದು - ದಾಸ - ಈಶ ಒಪ್ಪಂದ.

ದಾಸರ ದೇವರ ನಾಮಗಳಲ್ಲಿ ಏನಿದೆ ಏನಿಲ್ಲ ಎಂತಿಲ್ಲ.

ಭಗವಂತನಲ್ಲಿ ಭಕ್ತಿ ಇದೆ. ಸಂಸಾರದಲ್ಲಿ ವಿರಕ್ತಿ ಇದೆ. ಜ್ಞಾನದ ಯುಕ್ತಿ ತುಂಬಿದೆ. ಶಾಸ್ತ್ರದ ಶಕ್ತಿ ಇದೆ. ಸಂಗೀತದ ಆಳವಿದೆ. ಸಾಮಾಜಿಕ ಕಳಕಳಿ ಇದೆ. ಮುಕ್ತಿಪಥವ ತೋರುತಿದೆ.

ಮತ್ತೇನು ಬೇಕು?

ದಾಸರ ಅಂತರ್ಗತ ಮುಖ್ಯ ಪ್ರಾಣಾಂತರ್ಗತ ವಿಠ್ಠಲದೇನರಿಗೆ ಸಹಸ್ರ ನಮಿಸೋಣ.

ಡಿಂಗರಿಗರೆಲ್ಲ ಭೂಮಂಡಲಕೆ ಪುರುಂದರವಿಠಲನೇ ಪರದೈವವೆಂದು ಡಂಗುರವ ಸಾರೋಣ.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** Dr. ವಿಜೇಯೇಂದ್ರ ದೇಸಾಯಿ, ಧಾರವಾಡ